# ‘ಟಾಪ್’ನಲ್ಲಿ ಐಶ್





ಅಂತರರಾಷ್ಟ್ರೀಯ ವೆಬ್‌ಸೈಟ್ ಒಂದು, 2018ರಲ್ಲಿ ಅತ್ಯಂತ ಹೆಚ್ಚು ಮೆಚ್ಚುಗೆ ಪಡೆದ ಸೆಲೆಬ್ರಿಟಿ ಮಹಿಳೆಯರ ಪಟ್ಟಿಯೊಂದನ್ನು ಬಿಡುಗಡೆ ಮಾಡಿದೆ. ಈ ಪಟ್ಟಿಯಲ್ಲಿ ಐಶ್ವರ್ಯ ರೈ, ಪ್ರಿಯಾಂಕಾ ಚೋಪ್ರಾ ಮತ್ತು ದೀಪಿಕಾ ಪಡುಕೋಣೆ ಸ್ಥಾನ ಪಡೆದಿದ್ದು, ಬಾಲಿವುಡ್‌ನಲ್ಲಿ ದೊಡ್ಡ ಸುದ್ದಿಯಾಗಿದೆ.

35 ದೇಶಗಳಲ್ಲಿ 37 ಸಾವಿರ ಜನರನ್ನು ಈ ಸಮೀಕ್ಷೆಗಾಗಿ ಪ್ರಶ್ನೆ ಕೇಳಲಾಗಿತ್ತು. ಕೇಳಿದ ಪ್ರಶ್ನೆ ಒಂದೇ– ನೀವು ಅತ್ಯಂತ ಹೆಚ್ಚು ಮೆಚ್ಚುವ ಸೆಲೆಬ್ರಿಟಿಯೊಬ್ಬರ ಹೆಸರು ಹೇಳಿ– ಎಂದು. ವೆಬ್‌ಸೈಟ್ ಅಂತಿಮವಾಗಿ ಬಿಡುಗಡೆ ಮಾಡಿದ ಟಾಪ್20 ಸೆಲೆಬ್ರಿಟಿಯರ ಪಟ್ಟಿಯಲ್ಲಿ ಐಶ್ವರ್ಯ ರೈ 11ನೇ ಸ್ಥಾನ ಪಡೆದಿದ್ದರೆ, ಪ್ರಿಯಾಂಕಾ ಚೋಪ್ರಾ 12 ಮತ್ತು ದೀಪಿಕಾ ಪಡುಕೋಣೆ 13ನೇ ಸ್ಥಾನ ಪಡೆದಿದ್ದಾರೆ.

ಹಾಲಿವುಡ್ ತಾರೆ ಏಂಜೆಲಿನಾ ಜೋಲಿ ಈ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದಿದ್ದು, ಅಮೆರಿಕದ ಮಾಜಿ ಅಧ್ಯಕ್ಷ ಒಬಾಮಾ ಅವರ ಪತ್ನಿ ಮಿಶೆಲ್ ಒಬಾಮಾ ಎರಡನೇ ಸ್ಥಾನದಲ್ಲಿದ್ದಾರೆ. ಓಪ್ರಾ ವಿನ್‌ಫ್ರೀ, ಎಮ್ಮಿ ವಾಟ್ಸನ್, ಮಲಾಲಾ, ಏಂಜೆಲಾ ಮರ್ಕಲ್ ಮುಂತಾದ ಖ್ಯಾತನಾಮರೂ ಈ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

ಐಶ್ವರ್ಯ, ಪ್ರಿಯಾಂಕಾ ಮತ್ತು ದೀಪಿಕಾ ಮೂವರೂ ಹಾಲಿವುಡ್‌ನ ಸಿನಿಮಾಗಳಲ್ಲೂ ನಟಿಸಿರುವುದರಿಂದ ಸಹಜವಾಗಿಯೇ 35 ದೇಶಗಳಲ್ಲಿ ಅವರನ್ನು ಮೆಚ್ಚುವವರ ಸಂಖ್ಯೆ ಹೆಚ್ಚಿದೆ ಎನ್ನಬಹುದು. ಇವರಲ್ಲಿ ದೀಪಿಕಾ ಮತ್ತು ಪ್ರಿಯಾಂಕಾ ಈಗಲೂ ಸಿನಿಮಾಗಳಲ್ಲಿ ನಟಿಸುವ ಮೂಲಕ ಸುದ್ದಿಯಲ್ಲಿ ಇರುವವರು. ಆದರೆ ಐಶ್ವರ್ಯ ಇತ್ತೀಚೆಗೆ ಯಾವುದೇ ಸಿನಿಮಾದಲ್ಲಿ ನಟಿಸಿದಂತಿಲ್ಲ. ಹಾಗಿದ್ದೂ ಹಿಂದಿನ ಆಕೆಯ ಜನಪ್ರಿಯತೆ ಇನ್ನೂ ಉಳಿದುಕೊಂಡಿರುವುದು ಬಾಲಿವುಡ್ ಪಂಡಿತರಿಗೆ ಅಚ್ಚರಿ ಉಂಟು ಮಾಡಿದೆಯಂತೆ.

# ಹೃತಿಕ್ ನಿರೀಕ್ಷೆ

ಹೃತಿಕ್ ರೋಶನ್ ಹೊಸ ಚಿತ್ರಕ್ಕಾಗಿ ಅಭಿಮಾನಿಗಳು ಕಾತರದಿಂದ ಎದುರು ನೋಡುತ್ತಿರುತ್ತಾರೆ. 43ರ ಹರೆಯದ ಈ ನಟ ಈಗಲೂ ಚಿರಯುವಕನಂತೆ ಡ್ಯಾನ್ಸ್ ಮಾಡುವುದನ್ನು ಮೆಚ್ಚುವವರು ಸಾಕಷ್ಟಿದ್ದಾರೆ. ಬಾಲಿವುಡ್‌ನಲ್ಲಿ ಬಹುಶಃ ಅತ್ಯಧಿಕ ಏಳುಬೀಳುಗಳನ್ನು ಕಂಡ ನಟ ಈತನೇ ಇರಬೇಕು. ಕೆಲವು ಸಿನಿಮಾಗಳು ಬಾಲಿವುಡ್ ಇತರ ಟಾಪ್ ಹೀರೋಗಳ ಚಿತ್ರಗಳಿಗಿಂತ ಹೆಚ್ಚು ಕಲೆಕ್ಷನ್ ಕಂಡದ್ದೂ ಇದೆ; ಅದೇ ವೇಳೆ ಕೆಲವು ಚಿತ್ರಗಳು ಹೂಡಿದ ಹಣವೂ ವಾಪಸ್ ಬರದಂತೆ ನೆಲ ಕಚ್ಚಿದ್ದೂ ಇದೆ.

ಹೃತಿಕ್ ನಟಿಸಿದ ಸಯನ್ಸ್ ಫಿಕ್ಷನ್ ಸರಣಿ ಚಿತ್ರಗಳು ಸಾಕಷ್ಟು ಹಣ ಗಳಿಸಿವೆ. ಕ್ರಿಶ್ ಸರಣಿಯ ಮೂರೂ ಚಿತ್ರಗಳು ಅಭಿಮಾನಿಗಳ ಮನಗೆದ್ದಿವೆ. ಈಗ ಕ್ರಿಶ್–4 ಚಿತ್ರವನ್ನು ಅಭಿಮಾನಿಗಳು ಎದುರು ನೋಡುತ್ತಿದ್ದಾರೆ. ಆದರೆ ಇದಕ್ಕೂ ಮುನ್ನ ಹೃತಿಕ್ ನಟಿಸಿದ ‘ಸೂಪರ್ 30’ ಸಿನಿಮಾ ಬಿಡುಗಡೆ ಕಾಣಲಿದ್ದು ಕುತೂಹಲ ಕೆರಳಿಸಿದೆ. ಭಾರತದ ಅನುಪಮ ಗಣಿತಜ್ಞ ಆನಂದ ಕುಮಾರ್ ಯಶೋಗಾಥೆಯ ಕಥೆ ಹೊಂದಿರುವ ಈ ಚಿತ್ರದ ಬಗ್ಗೆ ಸ್ವತಃ ಹೃತಿಕ್ ಕೂಡಾ ಭಾರೀ ನಿರೀಕ್ಷೆ ಇಟ್ಟುಕೊಂಡಿದ್ದಾನೆ. ನಿಜಜೀವನದ ವ್ಯಕ್ತಿಯೊಬ್ಬನ ಕಥೆಯಲ್ಲಿ ಅಳವಡಿಸಿರುವ ಥ್ರಿಲ್ಲರ್ ಅಂಶವೇನು ಎನ್ನುವುದನ್ನೂ ಪ್ರೇಕ್ಷಕರೂ ಕಾಯುತ್ತಿದ್ದಾರೆ.

ಈ ಮಧ್ಯೆ ಹೃತಿಕ್ ನಟಿಸಲಿರುವ ಇನ್ನೂ ಎರಡು ಚಿತ್ರಗಳು ಪ್ರೇಕ್ಷಕರ ಕುತೂಹಲ ಕೆರಳಿಸಿವೆ. ಅದರಲ್ಲಿ ಒಂದು ಕಬೀರ್ ಖಾನ್ ನಿರ್ದೇಶನದ ಹೊಸ ಚಿತ್ರ. ಕಬೀರ್ ಖಾನ್ ನಿರ್ದೇಶಿಸಿದ ಸಲ್ಮಾನ್ ಖಾನ್ ಚಿತ್ರಗಳ ಯಶಸ್ಸನ್ನು ನೋಡಿರುವ ಹೃತಿಕ ಅಭಿಮಾನಿಗಳು ಈ ಜೋಡಿಯ ಚಿತ್ರದ ಬಗ್ಗೆ ಭಾರೀ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಅದರ ಜೊತೆಗೆ ಯಶ್‌ರಾಜ್ ಫಿಲಂಸ್‌ನ ಹೊಸ ಚಿತ್ರದಲ್ಲಿ ಹೃತಿಕ್, ಹೊಸ ಪೀಳಿಗೆಯ ಯಶಸ್ವಿ ಹೀರೊ ಟೈಗರ್ ಶ್ರಾಫ್ ಜತೆಯಾಗಿ ನಟಿಸುತ್ತಿದ್ದಾನೆ. ಜಾಕಿ ಶ್ರಾಫ್ ಮಗ ಟೈಗರ್ ಶ್ರಾಫ್, ತನ್ನ ಸಿಕ್ಸ್‌ಪ್ಯಾಕ್ ದೇಹ ಮತ್ತು ಸ್ಟಂಟ್‌ಗಳಿಂದ ಚಿತ್ರರಸಿಕರ ಮನ ಗೆದ್ದಿದ್ದು ಹೊಸ ಚಿತ್ರದಲ್ಲಿ ಹೃತಿಕ್‌ಗೆ ಸರಿಮಿಗಿಲಾಗಿ ನಟಿಸಿದ್ದಾನಂತೆ.

■ ಬಿಂದು

